# ಆತ್ಮೀಯ ಒಡನಾಟದಲ್ಲಿ....

■ ಪದ್ಮಾ ಶ್ರೀರಾಮ

ಮಿಂಚು ಸಣ್ಣಗೆ ಮಿಂಚಿದಂತೆ, ಒಮ್ಮೆ ಬಳ್ಳಿಯಂತೆ ಹರಿವ ಮಿಂಚು, ಮಗದೊಮ್ಮೆ ಫಳಾರ್ ಎಂದು ಕಣ್ಣು ಕೋರೈಸುವ ಬೆಳಕಿನಿಂದ ಮಿಂಚುವಂತಹದ್ದು ತೇಜಸ್ವಿಯವರ ವ್ಯಕ್ತಿತ್ವ. ಸಂಕೀರ್ಣ ವ್ಯಕ್ತಿತ್ವದ ತೇಜಸ್ವಿಯವರನ್ನು ನಾವು ಸ್ನೇಹಿತರು, ಉಳಿದವರಿಗಿಂತ ಹತ್ತಿರದಿಂದ ಒಂದು ಚಿತ್ರವನ್ನು ನೋಡುವ ನೋಡುಗರಂತೆ ನೋಡಿದೆವು. ಅವರ ಗುಣ, ಸ್ವಭಾವಗಳನ್ನು ಪರಿಭಾವಿಸಿದ್ದು ನಮ್ಮ ಗ್ರಹಿಕೆಗೆ ತಕ್ಕಂತೆ.

ಕನ್ನಡ ನಾಡು ಕಂಡ ಅದ್ಭುತ ದೈತ್ಯ ಪ್ರತಿಭೆ ತೇಜಸ್ವಿ ಎಂದುಬಿಟ್ಟರೆ ಅದು ಅವರ ಬರಹ, ಅನೇಕ ಹವ್ಯಾಸಗಳು, ಅಪಾರ ಜ್ಞಾನದಿಂದ ಕೂಡಿದ ಅವರ ಸಾಮಾಜಿಕ ಕಾಳಜಿ, ರಾಜಕೀಯ, ಸಾಂಸ್ಕೃತಿಕ ಯಾವ ವಿಷಯವನ್ನೇ ಆಗಲಿ ಯಾರೂ ಊಹಿಸದಿದ್ದ ದೃಷ್ಟಿಕೋನದಿಂದ ಅವರು ವಿಶ್ಲೇಷಿಸುತ್ತಿದ್ದ ರೀತಿ ಇವುಗಳಿಗೆ ಅನ್ವಯವಾಗುತ್ತದೆ. ಒಬ್ಬ ಲೇಖಕ ತನ್ನ ಸಂಸಾರದೊಡನೆ, ಗೆಳೆಯರೊಡನೆ ಹೇಗಿದ್ದರು ಎನ್ನುವುದೂ ಸಾಮಾನ್ಯವಾಗಿ ಜನರಿಗೆ ಕುತೂಹಲ ಉಂಟು ಮಾಡುವ ವಿಷಯ. ಏಕೆಂದರೆ ವಿಶೇಷ ವ್ಯಕ್ತಿಗಳ ಸ್ವಭಾವಗಳ ಬಗ್ಗೆ ಏನೇನೊ ಊಹಿಸುತ್ತಾರೆ ಜನ. ಮೇಲ್ನೋಟಕ್ಕೆ ತುಂಬಾ ಸರಳವಾಗಿದ್ದ ಈ ವ್ಯಕ್ತಿಯ ಬುದ್ಧಿ ಮತ್ತೆ, ನಡವಳಿಕೆ ಹೀಗೇ ಎಂದು ಹೇಳಲಾಗದಷ್ಟು ಸಂಕೀರ್ಣ. ಈ ಬರಹ ಅವರ ವ್ಯಕ್ತಿತ್ವದ ಕೊಂಚ ಭಾಗವನ್ನು ನಾನು ಕಂಡಂತೆ ಹೇಳುವ ಪ್ರಯತ್ನ.

ಹದಿಹರೆಯದಲ್ಲಿ ಕಥೆ, ಕಾದಂಬರಿ ಲೋಕದಲ್ಲಿ ವಿಹರಿಸುತ್ತಿದ್ದ ನನಗೆ ನನ್ನ ಪತಿ ಶ್ರೀರಾಮರನ್ನು ಮದ್ವೆ ಆದಾಗ ಅಪಾರ ಖುಷಿ ಆಯಿತು. ಇವರಿಂದ ನನಗೆ ತೇಜಸ್ವಿ, ಕುವೆಂಪು ಅವರನ್ನು ಹತ್ತಿರದಿಂದ ನೋಡುವ, ಅವರ ಮನೆಯವರ ಸಹಚರ್ಯೆಯ ಭಾಗ್ಯ ಸುದೀರ್ಘಕಾಲ ದೊರಕಿತು.

ಮುವ್ವತ್ತೇಳು ವರ್ಷಗಳ ಹಿಂದೆ ಮದುವೆಯ ನಂತರ ಪತಿಯೊಡನೆ ತೇಜಸ್ವಿಯವರ ತೋಟಕ್ಕೆ ಹೊರಟೆ. ಅದು ವಾಹನ ಸೌಕರ್ಯ ಕಮ್ಮಿ ಇದ್ದ ಕಾಲ. ಮೈಸೂರಿಂದ ಮೂಡಿಗೆರೆಗೆ ಬಸ್ಸಿನಲ್ಲಿ ಹೊರಟು ಮೂಡಿಗೆರೆ ಸಮೀಪದ ಜನ್ನಾಪುರ ಎಂಬ ದಾರಿ ಮಧ್ಯದ ಪುಟ್ಟ ಸ್ಥಳದಲ್ಲಿ ಇಳಿದಾಗ ತೇಜಸ್ವಿ ಒಂದು ದೊಡ್ಡ ಮರದ ಕೆಳಗೆ ತಮ್ಮ ಫೇಮಸ್ ಜೀಪಿನಲ್ಲಿ ಕಾದಿದ್ದರು. ಮೂರು ನಾಲ್ಕು ಕಿಲೋಮೀಟರ್ ದೂರ ಕುರುಚಲು ಕಾಡಿನ ಮನುಷ್ಯರಹಿತ ಜಾಗವನ್ನು ಹಾದು ಅವರ ತೋಟಕ್ಕೆ ಹೋದಾಗ ಒಂಟಿ ಹೆಂಚಿನ ಮನೆ. ಮನೆ ಹಿಂದೆ 'ಗಬೊ' ಎನ್ನುವ ಕಾಡು ಸುತ್ತಲೂ ಕಾಫಿ ತೋಟ ಕಾಣಿಸಿತು. ಹಸನ್ಮುಖಿ ರಾಜೇಶ್ವರಿ ನಮ್ಮನ್ನು ಸ್ವಾಗತಿಸಿದರು. ಇದು ಚಿತ್ರಕೂಟ ಎನ್ನುವ ಅವರ ಮೊದಲ ತೋಟ. ಹೊಸ ಮದುವಣಗಿತ್ತಿಗೆ ತೇಜಸ್ವಿಯವರಿಂದ ಸಿಕ್ಕ ಸ್ವಾಗತ ಎಂತಹದು ಗೊತ್ತೆ? ತೇಜಸ್ವಿಯವರ ಬರಹಗಳಿಂದ ಪ್ರಸಿದ್ಧವಾಗಿರುವ 'ಕಿವಿ' ನಾಯಿಯನ್ನು ನನ್ನ ಮೇಲೆ 'ಛೂ' ಬಿಟ್ಟರು! ಅದು ಬೊಗಳುತ್ತ ಬಂದು ನಾನು ಕುಳಿತಿದ್ದ ಖುರ್ಚಿಯ ಮೇಲೆ ಕಾಲು ಹಾಕಿ ನಿಂತುಬಿಟ್ಟಿತು. ಸದ್ಯ ಕಿರುಚದೆ ಬೆಪ್ಪು ತಕ್ಕಡಿಯಂತೆ ಸುಮ್ಮನೆ ಕುಳಿತೆ? ತೇಜಸ್ವಿ ಜೋರಾಗಿ ನಗುತ್ತ ಕಿವಿಯನ್ನು ಹಿಂದಕ್ಕೆ ಕರೆದರು. ಇಂಥ ತಮಾಷೆ ಪರೀಕ್ಷೆಗಳು ಮುಂದುವರಿದವು.



ತೋಟ ಸುತ್ತಲು ಹೋದಾಗ ಅಲ್ಲೊಂದು ಪುಟ್ಟ ಕೆರೆಗೆ ಅಡ್ಡಲಾಗಿ ಒಂದು ಉದ್ದನೆಯ ಮರ ಬಿದ್ದಿತ್ತು. ಅದರ ಮೇಲೆ ಸರಾಗವಾಗಿ ನಡೆದ ತೇಜಸ್ವಿ ನೀವೂ ಬನ್ನಿ ನೋಡೋಣ ಎಂದು ಸವಾಲೆಸೆದರು. ಸವಾಲಿಗೆ ಜವಾಬಿಲ್ಲ ನನ್ನಿಂದ! ಮಲೆನಾಡಿನಲ್ಲಿ ಮೀನು ಸಾರಿಗೆ ಹಾಕುವ ಜುಮ್ಮಿನ ಕಾಯಿಯನ್ನು ತಿನ್ನಿಸಿ ನಾಲಗೆ ತುರಿಕೆ ಬರಿಸಲು ನೋಡಿದರು! ಮೊದಲೇ ಅದರ ಬಗ್ಗೆ ತಿಳಿದಿದ್ದ ನಾನು ಬಲೆಗೆ ಬೀಳಲಿಲ್ಲ. ಅವರು ಪೇಚಿಗೆ ಸಿಲುಕಿಸಲು ಪ್ರಯತ್ನಿಸಿದಷ್ಟೂ ನಾನು ಅದ್ಹೇಗೊ ಜಾರಿಕೊಳ್ಳುತ್ತಿದ್ದೆ. ಅವರ ಈ ವಿನೋದಶೀಲತೆ ನನಗೊಂದು ಮಧುರ ಸ್ಮೃತಿ.

ನಾವು ನಾವೇ ಬಿಡುಬೀಸಾಗಿದ್ದ ಆ ಕಾಲದ್ದೇ ಒಂದು ಕಥೆ. ಸ್ನೇಹಿತರು, ಅವರ ಬಾಳ ಸಂಗಾತಿಗಳಾದ ನಾವು ಸೇರಿ ಕಾಲ ಕಳೆದದ್ದು ಒಂದು ಅಪೂರ್ವ ಅನುಭವ.

ಎಲ್ಲ ಸ್ನೇಹಿತರೂ ಕಾಗದ ಬರೆದು

ನೆನಪು

# ತೇಜಸ್ವಿ

ಕೊಂಡು ಎಲ್ಲೋ ಒಂದು ಕಡೆ ಸೇರಬೇಕೆಂದು ನಿರ್ಧರಿಸುತ್ತಿದ್ದೆವು. ಅದಕ್ಕಾಗಿ ಮೊದಲು ನಾವಿಬ್ಬರು ಮತ್ತು ರಾಮದಾಸ್ ಚಿತ್ರಕೂಟ ತಲುಪಿ, ಅಲ್ಲಿಂದ ತೇಜಸ್ವಿ, ರಾಜೇಶ್ವರಿಯವರೊಡನೆ ಜೀಪ್ ಹತ್ತಿ ಬೆಳಿಗ್ಗೆ ಹೊರಟಾಗ ನಿರ್ಧರಿಸಿರುತ್ತಿದ್ದುದೇ ಒಂದು ಗಮ್ಯಸ್ಥಾನ ಹೋಗುತ್ತಿದ್ದುದೇ ಮತ್ತೊಂದು ದಾರಿ. ಹೋಗ್ತಾ ಬರ್ತಾ ಕೆಮ್ಮಣ್ಣುಗುಂಡಿ ಹತ್ತಿ ಇಳಿಯುವುದು, ಸಿಕ್ಕಿದ್ದೆಲ್ಲಾ ತಿಂದು ಕುಡಿಯುವುದು! ನಿಜಕ್ಕೂ ಆಗ ಯೌವನ ಒಂದು ಮೋಜಿನ ಮೋಟಾರು ಗಾಡಿ. ಆ ಕಡೆ ವಾಲುತ್ತ, ಹಾಯುತ್ತ ಗಹಗಹಿಸಿ ನಗುತ್ತ ಸಂಜೆಗೊ ರಾತ್ರಿಗೊ ಸ್ನೇಹಿತ ಸುಂದರೇಶ್‌ರ ಮನೆ ತಲುಪಿದಾಗ ಅಲ್ಲಿ ಸ್ವಾಗತ. ಬೆಳಿಗ್ಗೆ ಸ್ನೇಹಿತ ಶಾಮಣ್ಣನವರ ಮನೆಗೆ. ಅಲ್ಲಿ ಸಿಹಿಪ್ರಿಯರಾದ ಶಾಮಣ್ಣನವರಿಗಾಗಿ ಅವರ ಪತ್ನಿ ಶ್ರೀದೇವಿ ಮನೆ ಕಿಟಕಿ ತೆರೆದು ಆ ಕಿಟಕಿಯಲ್ಲಿ ಕೊಬ್ಬರಿ ಮಿಠಾಯಿ ಇಟ್ಟಿರುತ್ತಿದ್ದರು. ಶಾಮಣ್ಣನವರು ಗದ್ದೆ ಕೆಲಸ ಮಾಡಿಸುತ್ತ ತಿನ್ನಲಿ ಅಂತ ಇಟ್ಟಿರುತ್ತಿದ್ದ ಮಿಠಾಯಿಗಳು ಸ್ನೇಹಿತರ ತಂಡದಿಂದ ಧ್ವಂಸ. ಹೀಗೆಲ್ಲ ಬರಿದೇ ಸುತ್ತಿ, ತಿಂದು ತೇಗುವುದೇನು ಮಹಾ ಎನ್ನುವ ಹಾಗಿಲ್ಲ. ಸ್ನೇಹಿತರ ನಡುವೆ ಬಿಸಿ ಬಿಸಿ ಚರ್ಚೆ, ಯಾವ ಒಕ್ಕೂಟ ರಚಿಸಬೇಕು, ಏನು ಬರೀಬೇಕು ಹೀಗೇ... ಇಂತಹುದೇ ಒಂದು ಓಡಾಟದ ಸಮಯದಲ್ಲಿ ಈ ಗೆಳೆಯರ ಗುಂಪು ಶಾಮಣ್ಣನವರ ತೋಟಕ್ಕೆ ಸಮೀಪದಲ್ಲಿದ್ದ ಕರಡಿಗಳ ತಾಣವೊಂದಕ್ಕೆ ಹೊರಟಿತು. ಸ್ವಲ್ಪ ಹಿಂದೆ ಆನವೇರಿ ಎಂಬ ಜಾಗದಲ್ಲಿ ಸುಂದರೇಶರ ಮೇಲೆ ಕರಡಿಯೊಂದು ದಾಳಿ ಮಾಡಿತ್ತು. ಕರಡಿಯನ್ನು ಅರಸಿ ಹೋದ ಗೆಳೆಯರ ಗುಂಪಿಗೆ ಕರಡಿಯ ಬದಲು ಕೆಲವು ಶಿಲಾಯುಧಗಳು ಸಿಕ್ಕಿದವು. ತೇಜಸ್ವಿಯವರು



**ಶ್ರೀರಾಮ್ ದಂಪತಿಗಳಿಗೆ ಬಳುವಳಿಯಾಗಿ ತೇಜಸ್ವಿ ಅವರು ಕೊಟ್ಟಿದ 'ಕಿವಿ' ಮಗ 'ರೆಡ್ಡಿ'**

**ಚಿತ್ರಕೃಪೆ: ಪದ್ಮಾಶ್ರೀರಾಮ್**

ಬಂದಿರುವ ವಿಷಯ ತಿಳಿದು ಆನವೇರಿ ಶಾಲೆಯ ಮಾಸ್ತರ್ ಒಬ್ಬರು ಬಂದು ತಮಗೂ ಶಿಲಾಯುಧಗಳು ಸಿಕ್ಕಿವೆ ಎಂದು ತೋರಿಸಿದರು. ಈ ಬಗ್ಗೆ ತೇಜಸ್ವಿ ಒಂದು ಲೇಖನವನ್ನೂ ಸಹ ಬರೆದರು.

ಅನಂತರ ಅವರ ಮಗಳು ಹುಟ್ಟಿದಳು. ಮೊದಲಿನ ನಿರಾತಂಕ ಓಡಾಟಕ್ಕೆ ತಾತ್ಕಾಲಿಕ ತಡೆ. ಆ ಸಂದರ್ಭದಲ್ಲಿ ತೇಜಸ್ವಿಯವರು ಮಗಳು ಹುಟ್ಟಿದ ಪ್ರಯುಕ್ತ ನಮಗೆ ಪಲಾವ್ ತಿನ್ನಿಸಲು ಕರೆದುಕೊಂಡು ಹೋಗಿದ್ದರು. ಆಗ ಅಯ್ಯೋ! ಮರೆತೇ ಬಿಟ್ಟಿದ್ದೆನಲ್ರೀ! ಎಂದು ಆಸ್ಪತ್ರೆಯಲ್ಲಿರುವ ಪತ್ನಿಗೆ ಊಟ ಕೊಡಲು ಓಡಿದರು. ಹೀಗೊಂದು ಸಲ ನಮ್ಮ ಗುಂಪು ಚಿತ್ರಕೂಟಕ್ಕೆ ಹೋದಾಗ ರಾಜೇಶ್ವರಿ ಕಾರಣಾಂತರ ಮೈಸೂರಿನಲ್ಲಿದ್ದರು. ಅಲ್ಲಿ ಗುಂಪಿನ ನಡುವೆ ನಾನೊಬ್ಬಳೇ ಹೆಂಗಸು. ಕರೆಂಟ್ ದೀಪವಿಲ್ಲ. ಸೌದೆ ಒಲೆ, ಮಿಕ್ಸರ್ ಹೆಸರು ಕೇಳೇ ಇಲ್ಲ! ನಾನು ಮನೆ ಗುಡಿಸಿ ಅಡಿಗೆ ಮಾಡಿದೆ. ತೇಜಸ್ವಿಯವರು ಮನೆ ಅಚ್ಚುಕಟ್ಟಾಗಿ ಇಲ್ಲದಿದ್ದರೆ

ರಾಜೇಶ್ವರಿ ಬೇಸರ ಮಾಡಿಕೊಳ್ಳುತ್ತಾರೆ ಎಂದು ತಾವೇ ಬಕೆಟ್‌ನಲ್ಲಿ ನೀರು ತಂದು ಮನೆಯೆಲ್ಲಾ ಸಾರಿಸಿದರು. ಕೆಲಸದ ನೀಲು ಬಂದಿರಲಿಲ್ಲ. ಇಂತಹ ವಿಲಕ್ಷಣ ಸ್ವಭಾವ ಅವರದ್ದು.

ಎಪ್ಪತ್ತರ ದಶಕದಲ್ಲಿ ತೇಜಸ್ವಿಯವರು ಆಗಾಗ್ಗೆ ಮೈಸೂರಿಗೆ ಬಂದಾಗ ನಮ್ಮೆಲ್ಲರನ್ನು ಕರೆದುಕೊಂಡು ಸಿನಿಮಾಕ್ಕೆ ಭೇಟಿ ಕೊಡುತ್ತಿದ್ದರು. ಫಿಲ್ಮ್ ಏನಾದರೂ ಇಷ್ಟವಾಗದಿದ್ರೆ ಎಲ್ಲರೂ ಸಾಮೂಹಿಕ ಸಿನಿಮಾ ತ್ಯಾಗ ಮಾಡಬೇಕಿತ್ತು. ತೇಜಸ್ವಿಯವರಿಗೆ ಕನ್ನಡ, ಇಂಗ್ಲಿಷ್ ಭಾಷೆ ಬಿಟ್ಟರೆ ಬೇರೆ ಭಾಷೆಗಳ ಪರಿಚಯವಿರಲಿಲ್ಲ. ಎಮರ್ಜೆನ್ಸಿಯ ನಂತರ 'ನ್ಯೂ ಡೆಲ್ಲಿ ಟೈಮ್ಸ್' ಎನ್ನುವ ಚಿತ್ರ ನೋಡುವಾಗ ನಾವುಗಳು ಸಂಭಾಷಣೆಗಳನ್ನು ಹಿಂದಿಯಿಂದ ಕನ್ನಡಕ್ಕೆ ತರ್ಜುಮೆ ಮಾಡಿ ತೇಜಸ್ವಿಯವರಿಗೆ ಹೇಳುತ್ತಿದ್ದೆವು. ಅಕ್ಕಪಕ್ಕದವರು ಎಷ್ಟು ಕೆಂಗಣ್ಣು ಬಿಟ್ಟರೂ ನಾವೇನೂ ಲೆಕ್ಕಿಸಲಿಲ್ಲ! ತೇಜಸ್ವಿಯವರು ಒಮ್ಮೆ ಈ ಜಟಕಾ ಗಾಡಿಯವರು 'ಬಿಟಾ ಲೇಲೆಕೊ ಜಾವ್‌ಜಿ' ಅನ್ನಿರ್‍ತಾರಲ್ಲ, ಹಾಗಂದ್ರೇನ್ರೀ ಎಂದರು. ಹಾಗಂದರೆ 'ಕೂರಿಸಿ ಕೊಂಡು ಹೋಗಿ' ಎಂದು ಅರ್ಥ ಎಂದೆ. ನೀವೂ ಪರವಾಗಿಲ್ಲ ಕಣ್ರೀ ಎಂದು ನಕ್ಕರು. ಇಂತಹ ಮುಗ್ಧ ಕುತೂಹಲ ಅವರ ವ್ಯಕ್ತಿತ್ವದ ಒಂದು ಪ್ರಮುಖ ಅಂಶ. ಈ ಕುತೂಹಲದಿಂದಾಗಿ ಅವರಿಂದ ಅನನ್ಯ ಸಾಹಿತ್ಯಸೃಷ್ಟಿ ಆಯಿತು.

ತೇಜಸ್ವಿಯವರೊಡನೆ ನಡೆಸಿದ ಸುತ್ತಾಟಗಳಲ್ಲಿ ನಾವೆಲ್ಲ ಸ್ನೇಹಿತರೂ ಭಾಗಿಗಳಾಗಿದ್ದೇವೆ. ಹೀಗೊಮ್ಮೆ ಅವರೊಡನೆ ಜೀಪಿನಲ್ಲಿ ಹೋಗುವಾಗ ಶಾಲ್ಮಲೀ... ಎಂದು ಉದ್ಗರಿಸಿದರು. ಇದೇ ಹೆಸರನ್ನು ನೆನಪಿಟ್ಟುಕೊಂಡಿದ್ದರಿಂದ ನಮ್ಮ ಮಗಳು ಶಾಲ್ಮಲಿ ಆದಳು. ಇದ್ದಕ್ಕಿದ್ದ ಹಾಗೆ ಏನಾದರೂ ಒಂದು ಶಬ್ದ ಹೇಳಿ, ಇದೇನು ಹೇಳಿ ನೋಡೋಣ ಎಂದು ಕೇಳುತ್ತಿದ್ದರು. ಅದೇನೆಂದು ಹೇಳಿದರೆ ಸರಿ ಇಲ್ಲವಾದಲ್ಲಿ ಅಯ್ಯೋ! ಗೂಷ್ಲುಗಳಾ! ಅದರರ್ಥ ಹೀಗೆ ತಿಳ್ಕೊಳಿ ಎನ್ನುತ್ತಿದ್ದರು. ಎರಡು ವರ್ಷಗಳ ಹಿಂದೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿದ್ದ ತಂಗಿ ತಾರಿಣಿಯವರನ್ನು ಭೇಟಿಯಾಗಲು ಹೋದಾಗ ಒಬ್ಬ ಹಳೇ ಕಾಲದ ಫುಟ್ಬಾಲ್ ಆಟಗಾರನ ಬಗ್ಗೆ ನನಗೊಂದು ಪ್ರಶ್ನೆಯ ಬಾಣ ಎಸೆದರು. ಯಥಾಪ್ರಕಾರ ಅವರೇ ಉತ್ತರ ಹೇಳಬೇಕಾಯ್ತು. ಇದೇ ನಮ್ಮ ಕೊನೆಯ ರಸಪ್ರಶ್ನೆ ಕಾರ್ಯಕ್ರಮ.

ಒಬ್ಬ ಛಾಯಾಗ್ರಾಹಕನಿಗಿರಬೇಕಾದ ಸೂಕ್ಷ್ಮ ಕಣ್ಣು, ಕಿವಿಗಳು ಅವರದಾಗಿದ್ದವು. ಒಮ್ಮೆ ಅವರ ಮನೆಯವರೊಡನೆ ಊಟಿಗೆ ಹೋಗುವಾಗ ಮದುಮಲೈ ನಂತರ ಸರಕ್ಕನೆ ಕಾರು ನಿಲ್ಲಿಸಿದರು. ಎರಡು ಕಾರುಗಳ ತುಂಬ ತುಂಬಿಕೊಂಡಿದ್ದ ನಾವೆಲ್ಲ ಇಳಿದೆವು. ಅಲ್ಲಿ ನೋಡಿ ಕೆಂದಳಿಲು ಎಂದು ಕೈತೋರಿಸಿದರು. ಅಲ್ಲೊಂದು ಎಲೆ ಉದುರಿ ಬರಲಾದ ಮರ. ಅಲ್ಲಿ ಇಲ್ಲಿ ಎಲ್ಲಿ ಎಂದು ಕಣ್ಣು ನಿರುಕಿಸಿದ ಮೇಲೆ ಉದ್ದನೆಯ ಬಾಲ ಇಳಿಬಿಟ್ಟು ಮರದ ಮೇಲೆ ಕುಳಿತಿದ್ದ ಕಡು ಕಂದು ಬಣ್ಣದ ಕೆಂದಳಿಲು ಕಾಣಿಸಿತು. ನಮಗೆ ಕಾಣಸದ್ದು ಅವರ ಸೂಕ್ಷ್ಮ ನೋಟಕ್ಕೆ ದಕ್ಕಿತ್ತು. ಒಂದು ಬಾರಿ ದಾಂಡೇಲಿಯಲ್ಲಿ ನನಗೆ ಬಹಳ ಎತ್ತರದ ಮರದ ಮೇಲೆ ಕುಳಿತಿದ್ದ ಹಾರ್ನ್‌ಬಿಲ್ ಹಕ್ಕಿಗಳನ್ನು ತೋರಿಸಿ, ನೋಡಿಬಿಡಿ ಕಾಡು ನಾಶವಾಗ್ತಿದೆ, ಮುಂದೆ ಇಂಥ ಹಕ್ಕಿಗಳು ನೋಡಲು ಸಿಗುತ್ತವೊ ಇಲ್ವೊ ಎಂದು ವಿಷಾದ ಪಟ್ಟರು.

ಒಂದು ಘಟನೆ ನೆನಪಾಗುತ್ತಿದೆ. ತೇಜಸ್ವಿ, ತಾರಿಣಿಯವರು, ಶ್ರೀರಾಮ್ ಮತ್ತು ನಾನು ಕೊಯಮತ್ತೂರಿನ ಮೂಲಕ ಕೇರಳಕ್ಕೆ ಹೋಗುತ್ತಿದ್ದೆವು. ಅವತ್ತು ಕೊಯಮತ್ತೂರಿನಲ್ಲಿ ಮತೀಯ ಗಲಭೆಯಿಂದಾಗಿ ಕರ್ಫ್ಯೂ ಜಾರಿಯಾಗಿತ್ತು. ಕೊಯಮತ್ತೂರಿನಲ್ಲಿ ದಾರಿ ಗೊತ್ತಿದ್ದ ಶ್ರೀರಾಮ್ ಹೇಗೋ ಮಾಡಿ ಕೇರಳಕ್ಕೆ ಹೋಗುವ ಪಾಲಕ್ಕಾಡ್ ದಾರಿಗೆ ಕಾರನ್ನು ಬರುವಂತೆ ಮಾಡಿದರು. ಅಲ್ಲೊಂದು ಎಳನೀರಿನ ಅಂಗಡಿ ಹತ್ತಿರ ಕಾರು ನಿಲ್ಲಿಸಿ ಗೆಳೆಯರಿಬ್ಬರು ಎಳನೀರಿನ

ನೆನಪು

# ತೇಜಸ್ವಿ ನೆನಪು

ಹತ್ತಿರ ಹೋದರು. ತೇಜಸ್ವಿಯವರ ಗಡ್ಡ, ಪಾದದ ಗಂಟಿನ ಕೊಂಚ ಮೇಲಕ್ಕಿದ್ದ ಶರಾಯಿ ನೋಡಿದ ತಕ್ಷಣ ಅಂಗಡಿಯಲ್ಲಿದ್ದವರ ಮುಖ ಸೀರಿಯಸ್ ಆಗಿ ಬಿಟ್ಟಿತು. ನಾವಿಬ್ಬರು ಹೆಂಗಸರು ಎಳನೀರಿನ ಹತ್ತಿರ ಹೋದಾಗ ಎಳನೀರಿನವನು ಮುಖ ಸಡಿಲಿಸಿ, ನಮಗೆ ಎಳನೀರು ಕೊಟ್ಟು "ಸೀಘ್ರಂ ಪೊರಪಡುಂಗೊ" ಎಂದು ವರಾತ ಹಚ್ಚಿದ. ಆಮೇಲೆ ಶ್ರೀರಾಮ್ ಹೇಳಿದರು ಮತೀಯ ಗಲಭೆಯ ಹಿನ್ನೆಲೆಯಲ್ಲಿ ಅವನು ತೇಜಸ್ವಿಯವರ ಗಡ್ಡ, ವೇಷಭೂಷಣ ನೋಡಿ ಇವನೊಬ್ಬ ಮುಸ್ಲಿಮ್ ಎಂದು ಭಾವಿಸಿದ್ದ. ನಿಮ್ಮಿಬ್ಬರ ಹಣೆಯ ಕುಂಕುಮ ನೋಡಿದ ಮೇಲೆ ಅವರು ತಣ್ಣಗಾದರು! ಈ ಪ್ರಯಾಣದಲ್ಲಿ ತೇಜಸ್ವಿಯವರು ಅನೇಕ ಛಾಯಾಚಿತ್ರಗಳನ್ನು ತೆಗೆದರು. ಅವು ಅವರ ಪ್ರಾಯೋಗಿಕ ಕಂಪ್ಯೂಟರ್ ಪೈಂಟಿಂಗ್‌ಗೆ ವಸ್ತುವಾದವು ಮತ್ತು ಅವರ ಕೊನೆಯ ಕೃತಿ ಮಾಯಾಲೋಕದಲ್ಲಿ ರೇಖಾಚಿತ್ರಗಳಾಗಿ ಮೂಡಿ ಬಂದಿವೆ.

ನಾಯಿಗಳ ಸಖ್ಯವಿಲ್ಲದ ತೇಜಸ್ವಿಯವರನ್ನ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ನಾನು ನೋಡಿದ ಮಟ್ಟಿಗೆ ನಾಯಿಗಳು ಅವರ ನಿರಂತರ ಸಂಗಾತಿಗಳು. ತೇಜಸ್ವಿಯವರ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ 'ಕಿವಿ'ಯ ಮಗ ರೆಡ್ಡಿಯೂ ಸಹ ಅವರೊಡನೆ ಇತ್ತು. ಮಗಳು ಸುಸ್ಮಿತ ಹುಟ್ಟಿದಾಗ ಮಗು ಮತ್ತು ನಾಯಿಗಳನ್ನು ಸಂಭಾಳಿಸುವುದು ಕಷ್ಟವಾಗಿ ರೆಡ್ಡಿ ನಮ್ಮ ಮನೆಗೆ ಬಂದಿತು. ರೆಡ್ಡಿ ಅತ್ಯಂತ ಸುಂದರವಾದ ಮುದ್ದುಮುದ್ದಾದ ಸ್ಪ್ಯಾನಿಯಲ್ ನಾಯಿ. ಅನೇಕ ವರ್ಷಗಳು ನನ್ನ ಮುದ್ದಿನ ಸಂಗಾತಿಯಾಗಿದ್ದ ರೆಡ್ಡಿಯನ್ನ ನಮ್ಮ ಮೊಹಲ್ಲಾ ಹುಡುಗರು ಅಮಿತಾಬ್ ಬಚನ್ ಎನ್ನುತ್ತಿದ್ದರು. (ಉದ್ದುದ್ದ ಕಿವಿಯಿದ್ದ ರೆಡ್ಡಿಯಂತೆ



ಆಗ ಅಮಿತಾಬ್ ಬಚನ್‌ನ ಹೇರ್‌ಸ್ಟೈಲ್ ಇತ್ತು) ಕಿವಿಯ ನಂತರ ಮರಿ ಎನ್ನುವ ನಾಯಿ ಅವರ ನೆಚ್ಚಿನ ಬಂಟ. ಇದು ನಮ್ಮೆಲ್ಲರ ಮಕ್ಕಳ ಜೊತೆಗಾರನಾಗಿ ಆಡುತ್ತಿತ್ತು. ಮರಿ ಅನಿರೀಕ್ಷಿತವಾಗಿ ಹಾವು ಕಚ್ಚಿ ಮೃತಪಟ್ಟಿತು. ನಂತರ ಮಿಟ್ಟಿ, ಜೂಲಿಗಳು ಬಂದವು. ಆಮೇಲೆ ಮತ್ತೊಂದು ಬಿಳಿ, ಕಪ್ಪು ಮಚ್ಚೆಯ ಸ್ಪ್ಯಾನಿಯಲ್ ನಾಯಿಮರಿ ತಂದರು. ಇದಕ್ಕೇನು ಹೆಸರು ಎಂದಾಗ ತೇಜಸ್ವಿ ಇದನ್ನ 'ಡಿಟ್ಟೊ ಮರಿ' ಎನ್ನೋಣ ಎಂದರು. ಮಕ್ಕಳೆಲ್ಲಾ ಬೇಡ ಚೆನ್ನಾಗಿಲ್ಲ ಎಂದರು. ಅದೂ ಸಹ 'ಮರಿ'ಯೇ ಆಯಿತು. ಇದು ಸಹ ಅತ್ಯಂತ ಸುಂದರ ನಾಯಿ. ತೇಜಸ್ವಿಯವರ ಜತೆ ತೋಟ ಸುತ್ತುವುದಲ್ಲದೆ, ನಾವ್ಯಾರಾದರೂ ಹೋದವರು ತೋಟದಲ್ಲಿ ತಿರುಗಾಡಲು ಹೋದರೆ, ಮರಿ ನಮಗಿಂತ ಮುಂಚೆ ಓಡಿ ಹೋಗಿ ಅಲ್ಲಲ್ಲಿ ನಿಂತು ನಾವು ಬರುತ್ತಿರುವೆವೊ ಇಲ್ಲವೊ ಎಂದು ಕಾದು, ನಾವು ಅದನ್ನು ಸಮೀಪಿಸಿದಾಗ ಮುಂದಕ್ಕೆ ಓಡುತ್ತಿತ್ತು. ಇದಕ್ಕೆ ಮನೆಗೆ ಯಾರು ಬಂದರೂ ಅವರಿಂದ ಮುದ್ದಿಸಿಕೊಳ್ಳುವ ಹುಚ್ಚು. ತಲೆ ಸವರಿ ಮುದ್ದಿಸದಿದ್ದರೆ, ತನ್ನ ಮೂತಿಯಿಂದ ನಮ್ಮ ಕೈಯನ್ನು ತಿವಿದು ಎಚ್ಚರಿಸುತ್ತಿತ್ತು! ಇದು ಸಹ ತೋಟದ ಬಾಗಿಲಿನಲ್ಲಿ ಲಾರಿಗೆ ಸಿಕ್ಕಿ ಅಸು ನೀಗಿದ ಮೇಲೆ ತೇಜಸ್ವಿ ತೀವ್ರವಾಗಿ ಬೇಸರಗೊಂಡರು. ಮುಂದೆ ಯಾವ ನಾಯಿಯನ್ನೂ ತರಲಿಲ್ಲ. ಮನೆಗೆ



WWW.TEJASWIVISMAYA.COM

ತಾನಾಗಿ ಬಂದ ಹಾದಿ ಬದಿಯ ನಾಯಿಯೇ 'ಟಾಮಿ' ಆಯಿತು. ಅಂದಿನಿಂದ ಕೊನೆ ದಿನದವರೆಗೆ ಈ ಸಾಧಾರಣ ನಾಯಿಗಳೇ ಅವರೊಡನಿದ್ದವು. ಕೊನೆ ದಿನ ಸಹ ಮೊಮ್ಮಗಳು ಮತ್ತು ಎರಡು ನಾಯಿಗಳೊಡನೆ ಕಾಲ ಕಳೆದಿದ್ದರು. ಕಿವಿ, ಮರಿ, ಟಾಮಿಗಳು ತೇಜಸ್ವಿಯವರ ಬದುಕಿನ ಒಂದು ಭಾಗವಾಗಿದ್ದವು.

ಇದುವರೆಗೆ ನನಗೆ ಹೊಳೆದಂತೆ ಹೇಳಿದ್ದು ದಿನ ನಿತ್ಯ ತೇಜಸ್ವಿಯವರ ಒಡನಾಟದಲ್ಲಿ ಕಂಡ ಒಂದು ಚಿತ್ರ. ನಾವು ಮಾಡಿದ ಸುತ್ತಾಟಗಳೆಲ್ಲಾ ಬರೀ ಮೋಜಿನ ಓಡಾಟವಲ್ಲ. ಇಂಥ ಓಡಾಟಗಳಲ್ಲಿ ಕಂಡು ಅನುಭವಿಸಿದ ಎಷ್ಟೊ ಸಂಗತಿಗಳ ಬಗ್ಗೆ ಬಿಸಿ ಚರ್ಚೆಗಳಾಗುತ್ತಿದ್ದವು. ಈ ಚರ್ಚೆಯ ಚಾವಡಿಗೆ ತೇಜಸ್ವಿ ಯಜಮಾನರಂತಿದ್ದರು. ಒಮ್ಮೆ ಊಟಿಯಿಂದ ವಾಪಸ್ ಬರುವಾಗ ಒಂದು ಹೊಲದ ತುಂಬಾ ಕೆಂಪು ಹೂಗಳನ್ನು ಕಂಡೆ. ಅಯ್ಯೊ! ಕಾರು ನಿಲ್ಲಿಸಿ ನೋಡಲಿಲ್ಲವಲ್ಲಾ ಎಂದು ಪರಿತಪಿಸಿದೆ. ಸ್ವಲ್ಪ ದೂರ ಹೋದ ಮೇಲೆ ಅದೇ ಹೂಗಳ ಮತ್ತೊಂದು ಹೊಲ ಸಿಕ್ಕಿತು. ತೇಜಸ್ವಿ ಕಾರು ನಿಲ್ಲಿಸಿ "ಹೋಗಿ ನೋಡಿ ಈ ಹೂವನ್ನ ನೋಡಲು ಇನ್ನೊಂದು ಜನ್ಮ ಏಕೆ ಎತ್ತುತ್ತೀರಾ" ಎಂದು ನಗೆಯಾಡಿದರು. ಅದು 'ಸಾಲ್ವಿಯಾ' ಎನ್ನುವ ಹೂವು. ಅದೇಕೆ ಅಷ್ಟು ಪ್ರಮಾಣದಲ್ಲಿ ಬೆಳೆದಿದ್ದರೊ ಗೊತ್ತಿಲ್ಲ. ಅವರು ಮಾತಾಡುವಾಗ ಸುಮ್ಮನೆ ಕುಳಿತು ಕೇಳಿದರೂ ಎಷ್ಟೊ ಜ್ಞಾನಾರ್ಜನೆ ಆಗುತ್ತಿತ್ತು. ತೇಜಸ್ವಿಯವರಿಗೆ ಪರಿಸರದ ಬಗ್ಗೆ ಇದ್ದ ಕಾಳಜಿಯನ್ನು ಅವರ ಬರಹಗಳ ಮೂಲಕ ಓದಿದ ಮೇಲೆ ಇಕಾಲಜಿಯನ್ನು ಪಠ್ಯವಾಗಿ ಓದಿದ್ದ ನನಗೆ ಒಂದು ಹೊಸ ಜ್ಞಾನೋದಯವಾಯ್ತು. ಅದುವರೆಗೆ ಒಂದು ನೀರು ತುಂಬಿದ ಗುಂಡಿಗಳಾಗಿದ್ದ ಕೆರೆಕುಂಟೆಗಳು ನನಗೆ ಸಜೀವ ಭಂಡಾರಗಳಾದವು. ಒಂದು ಕೆರೆ, ಅದರಲ್ಲಿ ನೀರು ಹಕ್ಕಿಗಳು, ಕಪ್ಪೆ, ಕೀಟಾದಿಗಳು, ಜೊಂಡು ತಾವರೆ ಏನೇನೊ ಕಂಡಾಗ ಇಲ್ಲೇನೊ ಆಗುತ್ತಿದೆ ಇಲ್ಲಿ ಜೀವಸಂಚಲನವಿದೆ ಎಂಬ ಸತ್ಯ ಆಗಷ್ಟೇ ಹೊಳೆದಂತೆ ರೋಮಾಂಚನಗೊಂಡೆ.

ಪರಿಸರವೆಂದರೆ ನಿಮ್ಮ ಸುತ್ತಮುತ್ತಲಿರುವ ಗಿಡ, ಮರ, ಬಳ್ಳಿ, ಕಾಡು ಮಾತ್ರವಲ್ಲ, ನೀವು ಮನುಷ್ಯರು ಸಹ ಈ ಪರಿಸರದೊಳಗಿರುವ ಒಂದು ಜೀವ ಎನ್ನುವುದನ್ನು ಮರೆಯದಿರಿ ಎನ್ನುತ್ತಿದ್ದರು. ತಮ್ಮ ಮಾತುಕೃತಿಗಳಿಂದ ತೇಜಸ್ವಿ ಅನೇಕರನ್ನು ಆರೋಗ್ಯಕರವಾಗಿ ಪ್ರಚೋದಿಸಿದರು. ಮಂಗಳೂರಿನ ಅಶೋಕವರ್ಧನ ಮತ್ತು ಗೆಳೆಯರು ಒಮ್ಮೆ ತೇಜಸ್ವಿಯವರು ಅವರಲ್ಲಿಗೆ ಹೋದಾಗ ಈ ಪರಿಸರವನ್ನು ಉಳಿಸಲು ಏನೂ ಮಾಡಬೇಕಾಗಿಲ್ಲ. ಸುಮ್ಮನೆ ಕೊಂಚ ಕಾಡನ್ನು ಏನೂ ಮಾಡದೆ ಅದರ ಪಾಡಿಗೆ ಬಿಟ್ಟುಬಿಡಿ. ಕಾಡು ವೃದ್ಧಿಸುತ್ತದೆ ಎಂದು ಹೇಳಿದ ಮಾತನ್ನು ಗಂಭೀರವಾಗಿ ತೆಗೆದುಕೊಂಡು ಆ ಗೆಳೆಯರು ಕೆಲವು ಎಕರೆ ಕಾಡನ್ನು ಕೊಂಡು, ಅಲ್ಲೇನೂ ಮಾಡದೆ ಹಾಗೆ ಬಿಟ್ಟಿದ್ದಾರೆ. ಅದೆಲ್ಲಿದೆ ಎಂದು ನಾವು ಹೇಳುವುದಿಲ್ಲ ಅಲ್ಲಿಗೆ ಯಾರೂ ಬರುವುದೂ ಬೇಡ ಎಂದಿದ್ದಾರೆ. ತೇಜಸ್ವಿಯವರು ಅನೇಕ ಕ್ಷೇತ್ರಗಳಲ್ಲಿ ಈ ರೀತಿ ಎಳೆಯರ ಕುತೂಹಲ ಮತ್ತು ಜೀವನ ದೃಷ್ಟಿಯನ್ನು ಬೆಳೆಸಿದ್ದಾರೆ.

ಜಾತಿ ಮತ, ಅಂತಸ್ತುಗಳ ಲೆಕ್ಕಾಚಾರವಿಲ್ಲದ, ಸ್ನೇಹಕ್ಕಾಗಿಯೇ ನಿಸ್ವಾರ್ಥವಾಗಿ ನಮ್ಮನ್ನೆಲ್ಲ ಪ್ರೀತಿಸಿದ ತೇಜಸ್ವಿಯವರ ಸ್ನೇಹ, ಪ್ರೀತಿಗಳನ್ನು ನೆನೆದಾಗ ವೀ.ಸಿ.ಯವರ 'ಸ್ನೇಹ' ಕವಿತೆಯ ಈ ಸಾಲುಗಳು ನೆನಪಾಗುತ್ತಿವೆ.

**ಸ್ವರ್ಗದೊಳಗೀ ಸ್ನೇಹ ದೊರೆವುದೇನೊ?**
**ಈ ಪರಿಯ ಸೌಹಾರ್ದ ಕೆಳೆಯ ವೈಭವವು?**
**ಇಲ್ಲದಿರೆ ನನಗಿಲ್ಲೆ ನೂರು ಜನ್ಮಗಳಿರಲಿ**
**ಎಲ್ಲಪರಿ ಮಮತೆಗಳ ಸತ್ಯ ಜೀವನವು!**

■